## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕುಮಟಾ.

ಉಪಸ್ಥಿತರು:- ಮೋಹನಕುಮಾರಿ ಎನ್.ಬಿ. ಎಲ್‌ಎಲ್.ಎಮ್.
ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ., ಕುಮಟಾ.

ಈ ದಿನ ದಿನಾಂಕ 14 ನೇ ಅಗಸ್ಟ 2018ನೇ ಇಸವಿ.
ಅಸಲು ದಾವಾ ಸಂಖ್ಯೆ : 38 / 2018
ಮಧ್ಯಂತರ ಅರ್ಜಿ ನಂಬರ-3

1) ಅಚ್ಯೂತ ಗೋಳಿ ನಾಯ್ಕ,
ನಿವೃತ್ತ ನೌಕರ, ಸಾ:ದೇವರಹಕ್ಕಲ,
ಕುಮಟಾ ಮತ್ತು ಇತರರು

(ಶ್ರೀ ಪಿ.ಜಿ.ಎಚ್. ವಕೀಲರು)

...ವಾದಿಯರು.

- ವಿರುದ್ಧ –

1) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,
ಹುಬ್ಬಳ್ಳಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ಹೆಸ್ಕಾಂ
ಕುಮಟಾ ಮತ್ತು ಇತರರು

(ಶ್ರೀ ಎಸ್.ಜಿ.ಎಸ್ ಮತ್ತು ಶ್ರೀ ಎಸ್.ಜೆ.ಎನ್, ವಕೀಲರು)

.... ಪ್ರತಿವಾದಿಯರು.

### ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 39 ನಿಯಮ 1 ಮತ್ತು 2 ಸಹವಾಚಕ 151 ನೇ ವಿಧಿ ಅನ್ವಯ ಸಲ್ಲಿಸಿದ ಮದ್ಯಂತರ ಅರ್ಜಿ ನಂ 3 ರ ಮೇಲೆ ಆದೇಶ.

ವಾದಿಯು ಈ ದಾವೆಯನ್ನು ದಾವಾ ಹಾತ್‌ನಕಾಶೆಯಲ್ಲಿ ಎ ಎಂತಾ ಗುರುತಿಸಿದ ವಿದ್ಯುತ್ ಕಂಬದಿಂದ ಬಿ ಎಂಬ ವಿದ್ಯುತ್ ಕಂಬಕ್ಕೆ ಇರುವ ವಿದ್ಯುತ್ ತಂತಿಗಳಲ್ಲಿ ಯಾವುದೇ ರೀತಿಯಿಂದ ವಿದ್ಯುತ್ ಸಂಪರ್ಕ ಮಾಡದಂತೆ ಪ್ರತಿವಾದಿಯರ ವಿರುದ್ದ ಶಾಶ್ವತ ತಡೆಯಾಜ್ಞೆ ಆದೇಶ

ಮಾಡಬೇಕಾಗಿ ಹಾಗೂ ಎ ಕಂಬದಿಂದ ಬಿ ಕಂಬಕ್ಕೆ ಇರುವ 2 ವಿದ್ಯುತ್ ತಂತಿಗಳನ್ನು ತೆಗೆದುಹಾಕುವಂತೆ 1ನೇ ಪ್ರತಿವಾದಿಯ ವಿರುದ್ದ ಶಾಶ್ವತ ತಡೆಯಾಜ್ಞೆ ಆದೇಶ ಮಾಡಬೇಕಾಗಿ ಕೇಳಿ ಸಲ್ಲಿಸಿದ್ದು ಮಧ್ಯಂತರ ಅರ್ಜಿ ನಂ 3ನ್ನು ಸಿ.ಪಿ.ಸಿ ಆದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿದ್ದು ದಾವಾ ನಿಕಾಲೆಯಾಗುವವರೆಗೆ ದಾವಾ ಹಾತ್ ನಕಾಶೆಯಲ್ಲಿ ಕಾಣಿಸಿದಂತೆ ಎ ದಿಂದ ಬಿ ವಿದ್ಯುತ್ ಕಂಬಕ್ಕೆ ಇರುವ 2 ತಂತಿಗಳಲ್ಲಿ ವಿದ್ಯುತ್ ಸಂಪರ್ಕ ಮಾಡದಂತೆ ಪ್ರತಿವಾದಿಯರ ವಿರುದ್ದ ತಾತ್ಕಾಲಿಕ ತಡೆಯಾಜ್ಞೆ ಆದೇಶ ಮಾಡಬೇಕಾಗಿ ಕೇಳಿ ಸಲ್ಲಿಸಿರುತ್ತಾರೆ.

2. ಮಧ್ಯಂತರ ಅರ್ಜಿ ನಂ 3ಕ್ಕೆ ವಾದಿಯು ತನ್ನ ಪ್ರಮಾಣಪತ್ರ ಸಲ್ಲಿಸಿದ್ದು, ಕುಮಟಾ ತಾಲೂಕು ಹಳೆ ಹೆರವಟ್ಟಾ ಗ್ರಾಮದ ಸರ್ವೆ ನಂಬರ 90 ಹಿಸ್ಸಾ 10 ರಲ್ಲಿ ವಾದಿಯು ಇಮಾರತು ಕಟ್ಟಿಸಿಕೊಂಡು ತನ್ನ ಕುಟುಂಬದೊಂದಿಗೆ ವಾಸ ಇರುವುದಾಗಿ, ವಾದಿಯ ಸ್ಥಳದ ಲಗ್ತಾಗಿ ಪೂರ್ವ ದಿಕ್ಕಿನಲ್ಲಿ ಸುಮಾರು 15 ಅಡಿ ಎತ್ತರದಲ್ಲಿ ಎ ಪಿ ಎಂ ಸಿ ಯಾರ್ಡ, ಕುಮಟಾಗೆ ಹೋಗುವ ರಸ್ತೆ ಇರುತ್ತದೆ ಎಂದು, ವಾದಿಯ ಸ್ಥಳದ ಪಶ್ಚಿಮ ದಿಕ್ಕಿನಲ್ಲಿ ಮಾಲತಿ ನಾರಾಯಣ ನಾಯ್ಕ ಇವರಿಗೆ ಸೇರಿದ ಸರ್ವೆ ನಂಬರ 90 ಹಿಸ್ಸಾ 9 ಸ್ಥಳ ಇದ್ದು ಅದಕ್ಕೆ ಲಗ್ತಾಗಿ ಪಶ್ಚಿಮ ದಿಕ್ಕಿನಲ್ಲಿ ಗೋವಿಂದಪ್ಪ ನಾರಾಯಣ ನಾಯ್ಕ ಇವರಿಗೆ ಸೇರಿದ ಸರ್ವೆ ನಂಬರ 90 ಹಿಸ್ಸಾ 8 ರ ಸ್ಥಳ ಇರುವುದಾಗಿ ಹಾಗೂ ಸದರಿ ಸ್ಥಳಕ್ಕೆ ಲಗ್ತಾಗಿ ಪಶ್ಚಿಮ ದಿಕ್ಕಿನಲ್ಲಿ ವಿದ್ಯಾ ರಾಮಾ ನಾಯ್ಕ ಹಾಗೂ ಶಶಾಂಕ ರಾಮಾ ನಾಯ್ಕ ಇವರಿಗೆ ಸೇರಿದ ಸರ್ವೆ ನಂಬರ 90 ಹಿಸ್ಸಾ 7 ರ ಸ್ಥಳ ಇರುವುದಾಗಿ ಮತ್ತು ಅವರವರ ಸ್ಥಳದಲ್ಲಿ ಅವರವರ ಮನೆ ಇರುವುದಾಗಿ ವಾದಿಯು ಹೇಳಿರುತ್ತಾರೆ. ವಾದಿಯ ಹಕ್ಕಿನ ಸ್ಥಳವು ಎತ್ತರದಲ್ಲಿದ್ದು ಮೇಲೆ ವಿವರಿಸಿದ ಸ್ಥಳಗಳು ತಗ್ಗಿನಲ್ಲಿ ಇರುತ್ತವೆ. ವಾದಿಯ ಸ್ಥಳದ ದಕ್ಷಿಣ ದಿಕ್ಕಿನಲ್ಲಿ 2ನೇ ಪ್ರತಿವಾದಿಯ ಕುಟುಂಬಕ್ಕೆ ಸೇರಿದ ಸರ್ವೆ ನಂಬರ 90 ಹಿಸ್ಸಾ 10 ರ ಸ್ಥಳ ಇದ್ದು ಅದರಲ್ಲಿ ಆತನ ವಾಸ್ತವ್ಯದ ಮನೆ ಇರುತ್ತದೆ. ಗೋವಿಂದ ನಾರಾಯಣ ನಾಯ್ಕ, ವಿದ್ಯಾ ರಾಮಾ ನಾಯ್ಕ ಹಾಗೂ 2ನೇ ಪ್ರತಿವಾದಿಯ ವಾಸದ ಇಮಾರತುಗಳಿಗೆ ವಿದ್ಯುತ್ ಸಂಪರ್ಕ ಕುರಿತು ವಿದ್ಯುತ್ ಲೈನನ್ನು ಸರ್ವೆ ನಂಬರ 90 ಹಿಸ್ಸಾ 7 ಹಾಗೂ ಸರ್ವೆ ನಂಬರ 90 ಹಿಸ್ಸಾ 8ನೇ ಗೋಷ್ಟಿದ ಸ್ಥಳದಲ್ಲಿರುವ ವಿದ್ಯುತ್ ಕಂಬದಿಂದ ಬಹಳ ಹಿಂದೆಯೇ ಎಳೆದು ವಿದ್ಯುತ್ ಸಂಪರ್ಕ ಪೂರೈಸಿದ್ದು ಇರುತ್ತದೆ.

3. ವಾದಿಯ ಮನೆಗೆ ಲಗ್ತಾಗಿ ಒಂದು ವಿದ್ಯುತ್ ಕಂಬ ಇದ್ದು ಅದರಿಂದ ವಾದಿಯ ಮನೆಗೆ ವಿದ್ಯುತ್ ಸಂಪರ್ಕ ಮಾಡಿದ್ದು ಇರುತ್ತದೆ. ಸದರಿ ಕಂಬದಿಂದ ಸರ್ವೆ ನಂಬರ 90 ಹಿಸ್ಸಾ 8 ರ ಸ್ಥಳದಲ್ಲಿರುವ ವಿದ್ಯುತ್ ಕಂಬಕ್ಕೆ ವಿದ್ಯುತ್ ತಂತಿಗಳನ್ನು ಎಳೆದಿದ್ದು ಇರುತ್ತದೆ. ಆದರೆ ಸದರಿ ವಿದ್ಯುತ್ ತಂತಿಗಳು ನೆಲ ಮಟ್ಟದಿಂದ ಕೇವಲ 10-12 ಫೂಟ ಎತ್ತರದಲ್ಲಿ ಇದ್ದುದರಿಂದ ಮಳೆಗಾಲದಲ್ಲಿ ವಿದ್ಯುತ್ ಪ್ರವಹಣದಿಂದಾಗಿ ವಾದಿಯರಿಗೆ ಅವರ ಇಮಾರತಿನಲ್ಲಿ ವಾಸಿಸಲು ಮತ್ತು ಅವರ ಹಕ್ಕಿನ ಸ್ಥಳದ ಕಬ್ಜಾ ಮಾಡಲು ಪದೇ ಪದೇ ವಿದ್ಯುತ್ ಶಾಕ್ ಆಗುತ್ತಿತ್ತು. ಆ ಕುರಿತು ವಾದಿಯು 1ನೇ ಪ್ರತಿವಾದಿ ಸಂಸ್ಥೆಯ ಮೇಲಾಧಿಕಾರಿಗಳಿಗೆ ಲಿಖಿತ ದೂರು ಕೊಟ್ಟಿದ್ದರಿಂದ 1ನೇ ಪ್ರತಿವಾದಿ ಸಂಸ್ಥೆಯವರು ವಾದಿಗೆ ಲಿಖಿತವಾಗಿ ಪತ್ರ ಬರೆದು ವಾದಿಯ ಖರ್ಚಿನಲ್ಲಿಯೇ ಮೇಲೆ ಹೇಳಿದ ವಿದ್ಯುತ್ ತಂತಿಗೆ ಕೊಟೇಡ್ ತಂತಿಯನ್ನು ಹಾಕಿಸಿಕೊಡಬೇಕು ಎಂದು ತಿಳಿಸಿದ್ದರು. ಆ ಪ್ರಕಾರ ವಾದಿಯು ಅವನ ಖರ್ಚಿನಲ್ಲಿ ಕೊಟೇಡ್ ತಂತಿಯನ್ನು ಖರೀದಿಸಿ ವಿದ್ಯುತ್ ಇಲಾಖೆಗೆ ನೀಡಿದ ಪ್ರಕಾರ ದಿನಾಂಕ 21-2-2018 ರಂದು 1ನೇ ಪ್ರತಿವಾದಿ ಸಂಸ್ಥೆಯ ಲೈನ್‌ಮನ್ ಬಂದು ವಾದಿಯ ಮನೆಯ ಹತ್ತಿರ ಇರುವ ವಿದ್ಯುತ್ ಕಂಬದಿಂದ ಮೊದಲು ಇದ್ದ ವಿದ್ಯುತ್ ತಂತಿಗೆ ಸಂಪರ್ಕ ಕಡಿತಗೊಳಿಸಿದ್ದು ಇರುತ್ತದೆ. ಗೋವಿಂದಪ್ಪ ನಾರಾಯಣ ನಾಯ್ಕ, ವಿದ್ಯಾ ನಾಯ್ಕ ಮತ್ತು 2ನೇ ಪ್ರತಿವಾದಿಯ ಮನೆಗೆ ಗೋವಿಂದಪ್ಪ ನಾರಾಯಣ ನಾಯ್ಕ ಇವರ ಸ್ಥಳದಲ್ಲಿರುವ ಕಂಬಕ್ಕೆ ವಿದ್ಯಾ ನಾಯ್ಕ ಇವರ ಸ್ಥಳದಲ್ಲಿರುವ ಕಂಬದಿಂದ ವಿದ್ಯುತ್ ಸಂಪರ್ಕ ನೀಡಿದ್ದು ಇರುತ್ತದೆ.

4. ಹೀಗಿರುವಲ್ಲಿ 2ನೇ ಪ್ರತಿವಾದಿಯು 1ನೇ ಪ್ರತಿವಾದಿ ಸಂಸ್ಥೆಯ ಮೇಲೆ ಒತ್ತಡ ತಂದು ಗೋವಿಂದ ನಾರಾಯಣ ನಾಯ್ಕು ಇವರ ಸ್ಥಳದಲ್ಲಿರುವ ವಿದ್ಯುತ್ ಕಂಬದಿಂದ ವಾದಿಯ ಮನೆಯ ಹಿಂದುಗಡೆ ಇರುವ ವಿದ್ಯುತ್ ಕಂಬಕ್ಕೆ ಪುನಃ ವಿದ್ಯುತ್ ಸಂಪರ್ಕ ನೀಡಬೇಕೆಂದು ಕೇಳಿರುತ್ತಾನೆ. ಆ ರೀತಿ ವಿದ್ಯುತ್ ಸಂಪರ್ಕ ಮಾಡಿದಲ್ಲಿ ವಾದಿಗೆ ಮತ್ತು ಅವನ ಕುಟುಂಬದವರಿಗೆ ಅವರ ವಾಸ್ತವ್ಯದ ಮನೆಯಲ್ಲಿ ಮಳೆಗಾಲದಲ್ಲಿ ವಾಸ ಮಾಡಲು ಸಾಧ್ಯವಿರುವುದಿಲ್ಲಾ. ಗೋವಿಂದಪ್ಪ ನಾರಾಯಣ ನಾಯ್ಕ ಇವರ ಸ್ಥಳವು ವಾದಿಯ ಹಕ್ಕಿನ ಸ್ಥಳಕ್ಕಿಂತ ಕನಿಷ್ಟ 15 ಫೂಟ ಆಳದಲ್ಲಿ ಇರುವುದರಿಂದ ಸದರಿ ವಿದ್ಯುತ್ ತಂತಿಗಳು ಮನುಷ್ಯರ ದೇಹಕ್ಕೆ ತಗಲುವ ಸಂದರ್ಭವು ಸಹ ಇರುತ್ತದೆ. ಕಾರಣ ವಾದಿಯು

ಪ್ರತಿವಾದಿಯರ ವಿರುದ್ದ ಈ ದಾವೆಯನ್ನು ಸಲ್ಲಿಸಿದ್ದು ದಾವಾ ಕೊನೆಯ ನಿಖಾಲೆಯವರೆಗೆ ಅರ್ಜಿಯಲ್ಲಿ ಕೇಳಿದಂತೆ ತಾತ್ಕಾಲಿಕ ತಡೆಯಾಜ್ಞೆ ನೀಡಬೇಕಾಗಿ ಕೇಳಿಕೊಂಡಿರುತ್ತಾರೆ.

5. ವಾದಿಯರ ದಾವೆಗೆ 1ನೇ ಪ್ರತಿವಾದಿಯು ಉದಾಹರಣೆಯನ್ನು ಸಲ್ಲಿಸಿದ್ದು ಸದರಿ ಉದಾಹರಣೆಯನ್ನೇ ಮಧ್ಯಂತರ ಅರ್ಜಿ ನಂ 3ಕ್ಕೆ ತಕರಾರು ಎಂದು ಪರಿಗಣಿಸಬೇಕಾಗಿ ಜ್ಞಾಹಿರಿ ಸಲ್ಲಿಸಿರುತ್ತಾರೆ. ಸದರಿ ಉದಾಹರಣೆಯಲ್ಲಿ ದಾವೆಯಲ್ಲಿ ಬರೆದಂತೆ ಸರ್ವೆ ನಂಬರ 90 ಹಿಸ್ಸಾ 8 ರ ಸ್ಥಳದಲ್ಲಿ ಇರುವ ವಿದ್ಯುತ್ ಕಂಬಕ್ಕೆ ವಿದ್ಯುತ್ ತಂತಿಗಳನ್ನು ಎಳೆದಿರುವುದನ್ನು ಒಪ್ಪಿಕೊಂಡಿದ್ದು ಸದರಿ ವಿದ್ಯುತ್ ತಂತಿಯನ್ನು ತೆಗೆದು ಕೊಟೇಡ್ ತಂತಿಯನ್ನು ಹಾಕಲು ವಾದಿಯು ಈ ಪ್ರತಿವಾದಿಗೆ ತಿಳಿಸಿದಾಗ ಈ ಪ್ರತಿವಾದಿ ಸಂಸ್ಥೆಯ ಪರವಾನಿಗೆ ಪಡೆದು ಕೊಟೇಡ್ ತಂತಿಯನ್ನು ಹಾಕುವಂತೆ ತಿಳಿಸಿದ್ದರೆಂದು, ಆದರೆ ವಾದಿಯು ಪ್ರತಿವಾದಿ ಸಂಸ್ಥೆಯವರಿಗೆ ತಿಳಿಸಿದೇ ಅವರ ಪರವಾನಿಗೆಯನ್ನು ಪಡೆಯದೇ ಅನಧಿಕೃತವಾಗಿ ಯಾರದೋ ಮುಖಾಂತರ ಕೊಟೇಡ್ ತಂತಿಯನ್ನು ಬದಲಿಸಿಕೊಂಡಿರುತ್ತಾರೆಂದು ಹಾಗೂ ದಾವಾ ಹಾತ್ ನಕಾಶೆಯಲ್ಲಿ ತೋರಿಸಿದಂತಹ ಎ ಮತ್ತು ಬಿ ಕಂಬಗಳ ನಡುವೆ ಅನಾದಿಕಾಲದಿಂದಲೂ ಇದ್ದ ವಿದ್ಯುತ್ ತಂತಿಯನ್ನು ವಾದಿಯು ಪ್ರತಿವಾದಿ ಸಂಸ್ಥೆಗೆ ಗೊತ್ತಾಗದಂತೆ ಕಾನೂನು ಬಾಹಿರವಾಗಿ ಕತ್ತರಿಸಿರುವುದಾಗಿ 1ನೇ ಪ್ರತಿವಾದಿ ಹೇಳಿರುತ್ತಾರೆ. ಈಗ ಸದರಿ ಕಂಬಗಳ ನಡುವೆ ಯಾವುದೇ ವಿದ್ಯುತ್ ತಂತಿ ಇರುವುದಿಲ್ಲಾ ಮತ್ತು ವಾದಿಯು ತುಂಡು ಮಾಡಿದ ವಿದ್ಯುತ್ ತಂತಿಗಳು ಸ್ಥಳದಲ್ಲಿ ಬಿದ್ದಿರುತ್ತವೆ ಎಂದು ಈ ಪ್ರತಿವಾದಿಯು ಹೇಳಿದ್ದು ಈ ಪ್ರತಿವಾದಿ ಸಂಸ್ಥೆಯವರು 2ನೇ ಪ್ರತಿವಾದಿ ಅಥವಾ ಇನ್ನಾವುದೇ ವ್ಯಕ್ತಿಗಳ ಕಾರಣದಿಂದಾಗಿ ಸದರಿ ಕಂಬಗಳಿಗೆ ಇದ್ದ ತಂತಿಯಲ್ಲಿ ವಿದ್ಯುತ್ ಹರಿಸಿದ್ದು ಇರುವುದಿಲ್ಲಾ ಮತ್ತು ಇನ್ನೂ ಮುಂದೆಯೂ ಹರಿಸುವುದಿಲ್ಲಾ ಎಂದು ಹೇಳಿದ್ದು ವಾದಿಯ ಸಲ್ಲಿಸಿರುವ ದಾವೆಯನ್ನು ಹಾಗೂ ಮಧ್ಯಂತರ ಅರ್ಜಿಯನ್ನು ಖರ್ಚು ಸಹಿತ ವಜಾ ಮಾಡಬೇಕಾಗಿ ಕೇಳಿಕೊಂಡಿರುತ್ತಾರೆ.

6. ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ 2ನೇ ಪ್ರತಿವಾದಿಯು ತಮ್ಮ ತಕರಾರನ್ನು ಸಲ್ಲಿಸಿದ್ದು ಈ ಪ್ರತಿವಾದಿ ವಾಸ್ತವ್ಯ ಇರುವ ಮನೆಗೆ ಅನಾದಿಯಿಂದ 1ನೇ ಪ್ರತಿವಾದಿ ಸಂಸ್ಥೆಯಿಂದ ವಿದ್ಯುತ್ ಸ್ಥಾವರ ಸಂಖ್ಯೆ ಕೆ ಎಲ್ 1593 ನೇದರಂತೆ ವಿದ್ಯುತ್ ಸಂಪರ್ಕ ಪಡೆದು ಉಪಯೋಗಿಸಿ

ಬಂದಿದ್ದು ಇರುತ್ತದೆ. ಆದರೆ ದಿನಾಂಕ 9-3-2018 ರಂದು ಈ ಪ್ರತಿವಾದಿಯು ಮನೆಯಲ್ಲಿ ಇಲ್ಲದ ಸಮಯದಲ್ಲಿ ಒಬ್ಬ ಜೂಜೆ ಎಫ್ ರೊಡ್ರಿಗಸ್ ಇವರು ಈ ಪ್ರತಿವಾದಿಯ ಮನೆಯ ಹತ್ತಿರ ಇರುವ ವಿದ್ಯುತ್ ಕಂಬದಿಂದ ಈ ಪ್ರತಿವಾದಿಯ ಮನೆಗೆ ಪೂರೈಕೆಯಾಗಿದ್ದ ವಿದ್ಯುತ್ ಸಂಪರ್ಕ ಕಡಿತಗೊಳಿಸಿರುತ್ತಾರೆ. ಆ ಕುರಿತು ಈ ಪ್ರತಿವಾದಿಯ ತಾಯಿಯು ಅವರಲ್ಲಿ ವಿಚಾರಿಸಿದಾಗ ತಾನು ಕೆ ಇ ಬಿ ಕುಮಟಾದ ಲೈನ್‌ಮನ್ ಎಂದು ತಿಳಿಸಿ ಇಲಾಖೆಯ ಅಧಿಕಾರಿಗಳು ಸದರಿ ಮನೆಗೆ ಬೇರೆ ಕಡೆಯಿಂದ ವಿದ್ಯುತ್ ಕೊಡಲು ಹೇಳಿದ್ದಾರೆ ಎಂದು ಹೇಳಿ ತರಾತುರಿಯಲ್ಲಿ ಪ್ರತಿವಾದಿಯ ಮನೆಗೆ ಬೇರೆ ಮಾರ್ಗದಿಂದ ಸರ್ವಿಸ್ ವೈರ್ ಎಳೆದು ಸಂಪರ್ಕ ನೀಡಿ ಹೋಗಿರುತ್ತಾರೆಂದು ಈ ಪ್ರತಿವಾದಿಯು ಹೇಳಿರುತ್ತಾರೆ. ಆ ಕುರಿತು ಈ ಪ್ರತಿವಾದಿಯು 1ನೇ ಪ್ರತಿವಾದಿಯ ಬಳಿ ವಿಚಾರಿಸಿದಾಗ ಆ ರೀತಿಯಾಗಿ ಯಾವುದೇ ವ್ಯಕ್ತಿಯನ್ನು ತಾವು ಕಳಿಸಿದ್ದು ಇರುವುದಿಲ್ಲಾ ಎಂದು ಹೇಳಿದ್ದರಿಂದ ಈ ಪ್ರತಿವಾದಿಯ ತಾಯಿಯು 1ನೇ ಪ್ರತಿವಾದಿಗೆ ಹಾಗೂ ಕುಮಟಾ ಪೊಲೀಸ ಠಾಣೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದು ಇರುತ್ತದೆ. ಸದರಿ ದೂರಿನ ಅನ್ವಯ 1ನೇ ಪ್ರತಿವಾದಿಯು ಈ ಪ್ರತಿವಾದಿಯ ಮನೆಗೆ ಮೊದಲು ಇದ್ದಂತೆ ವಿದ್ಯುತ್ ಸಂಪರ್ಕವನ್ನು ನೀಡಲು ಮುಂದಾಗಿ ತಂತಿಗಳನ್ನು ಜೋಡಿಸಿ ಸಂಪರ್ಕ ನೀಡಿ ಹೊದ ಕೂಡಲೇ ವಾದಿಯು ಸದರಿ ವಿದ್ಯುತ್ ತಂತಿಗಳನ್ನು ಎಳೆದು ಸಂಪರ್ಕವನ್ನು ತಪ್ಪಿಸಿರುತ್ತಾರೆ. ಈ ರೀತಿಯಾಗಿ ವಾದಿಯು ಕಾನೂನು ಬಾಹಿರ ಕೃತ್ಯ ಎಸಗಿರುವುದನ್ನು ಮುಚ್ಚಿಟ್ಟು ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ನೀಡಿ ಏಕಪಕ್ಷಿಯ ತಾತ್ಕಾಲಿಕ ತಡೆಯಾಜ್ಞೆ ಆದೇಶ ಪಡೆದುಕೊಂಡಿರುತ್ತಾರೆ. ಕಾರಣ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ಖರ್ಚು ಸಹಿತ ವಜಾ ಮಾಡಬೇಕಾಗಿ ಕೇಳಿಕೊಂಡಿರುತ್ತಾರೆ.

7. ಎರಡೂ ಪಕ್ಷಗಾರರ ವಾದವನ್ನು ಆಲಿಸಿ, ಕಡತಗಳನ್ನು ಪರಿಶೀಲಿಸಲಾಯಿತು.

8. ಈ ಕೆಳಕಂಡ ಅಂಶಗಳು ನನ್ನ ಅವಗಾಹನೆಗೆ ಉದ್ಭವಿಸುತ್ತವೆ.

1. ವಾದಿಯರು ಮೇಲ್ನೋಟಕ್ಕೆ ಸಮ್ಮತ ಎನ್ನಿಸುವ ಪ್ರಕರಣವನ್ನು ಪ್ರತಿಪಾದಿಸಿದ್ದಾರೆಯೆ?
2. ಅನುಕೂಲತೆಯ ಒಲವು ವಾದಿಯರ ಪರವಾಗಿದೆಯೆ?
3. ಮಧ್ಯಂತರ ಅರ್ಜಿಯನ್ನು ಪುರಸ್ಕರಿಸದೇ ಇದ್ದಲ್ಲಿ ವಾದಿಯರಿಗೆ ಭರಿಸಲಾಗದ ಹಾನಿ ಉಂಟಾಗುವುದೇ?

4. ಯಾವ ಆದೇಶ?

9. ಮೇಲಿನ ಅಂಶಗಳಿಗೆ ನನ್ನ ಉತ್ತರ ಕೆಳಗಿನಂತಿವೆ.

ಅಂಶ ನಂ.1 ರಿಂದ 3ಃ ನಕಾರಾತ್ಮಕವಾಗಿ
ಅಂಶ ನಂ.4 ಃ ಅಂತಿಮ ಆದೇಶದಂತೆ, ಕೆಳಕಂಡ ಕಾರಣಗಳಿಗಾಗಿ

## ಕಾರಣಗಳು

10 **ಅಂಶ ನಂ .1 ರಿಂದ 3 ಃ** ವಾದಿಯು ಈ ದಾವೆಯನ್ನು ದಾವಾ ಸಂಗಡ ಸಲ್ಲಿಸಿರುವ ಹಾತ್ ನಕಾಶೆಯಲ್ಲಿ ಎ ಮತ್ತು ಬಿ ಎಂಬ ಗುರುತಿಸಿದ ಗುರುತಿಸಿರುವ ಕಂಬಗಳ ಮಧ್ಯ ಇರುವ ವಿದ್ಯುತ್ ತಂತಿಗಳಲ್ಲಿ ಯಾವುದೇ ರೀತಿಯಿಂದ ವಿದ್ಯುತ್ ಹಾಯಿಸದಂತೆ ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸದಂತೆ ಪ್ರತಿವಾದಿಯರ ವಿರುದ್ದ ಶಾಶ್ವತ ತಡೆಯಾಜ್ಞೆ ಪರಿಹಾರ ಕೋರಿದ್ದು ಸದರಿ ವಿದ್ಯುತ್ ತಂತಿಗಳನ್ನು ತೆಗೆದುಹಾಕುವಂತೆ 1ನೇ ಪ್ರತಿವಾದಿಗೆ ಆದೇ ಮಾಡಬೇಕಾಗಿಯೂ ಕೇಳಿಕೊಂಡು ಸಲ್ಲಿಸಿರುತ್ತಾರೆ. ದಾವಾ ಕೊನೆಯ ನಿಖಾಲೆಯವರೆಗೆ ಸದರಿ ವಿದ್ಯುತ್ ಕಂಬಗಳ ನಡುವೆ ಇರುವ 2 ತಂತಿಗಳಲ್ಲಿ ಯಾವುದೇ ರೀತಿಯ ವಿದ್ಯುತ್ ಸಂಪರ್ಕ ಕಲ್ಪಿಸದಂತೆ ಪ್ರತಿವಾದಿಯರ ವಿರುದ್ದ ತಾತ್ಕಾಲಿಕ ತಡೆಯಾಜ್ಞೆ ಆದೇಶ ಮಾಡಬೇಕಾಗಿ ಕೇಳಿಕೊಂಡಿರುತ್ತಾರೆ. ವಾದಿಯು ಈ ದಾವೆಯನ್ನು ಸಲ್ಲಿಸಿದ ದಿನಾಂಕದಂದೇ ನ್ಯಾಯಾಲಯವು ಪ್ರತಿವಾದಿಯರ ವಿರುದ್ದ ಏಕತರ್ಫಿ ಹಂಗಾಮಿ ತಡೆಯಾಜ್ಞೆ ಆದೇಶವನ್ನು ನೀಡಿರುತ್ತದೆ. ಆ ನಂತರ ಸದರಿ ಆದೇಶದ ನೋಟೀಸು ಮತ್ತು ದಾವಾ ಸಮನ್ಸ್ ಪ್ರತಿವಾದಿಯರಿಗೆ ಜಾರಿ ಆಗಿದ್ದು ಪ್ರತಿವಾದಿಯರು ವಾದಿಯ ದಾವೆಗೆ ಮತ್ತು ಮಧಂತರ ಅರ್ಜಿಗೆ ತಕರಾರು ಸಲ್ಲಿಸಿರುತ್ತಾರೆ. ಪ್ರತಿವಾದಿಯರ ಮುಖ್ಯ ತಕಾರರು ಏನೆಂದರೆ ವಾದಿಯು 1ನೇ ಪ್ರತಿವಾದಿಯಿಂದ ಯಾವುದೇ ಅಧಿಕೃತ ಪರವಾನಿಗೆ ಪಡೆಯದೇ ಅನಧಿಕೃತ ವ್ಯಕ್ತಿಯಿಂದ ದಾವಾ ವಿದ್ಯತ್ ಕಂಬಳಿಗೆ ಹಾಕಿದ ತಂತಿಗಳಿಗೆ ಕೊಟೇಡ್ ವೈರ್ ಬದಲಿಸಿಕೊಂಡಿದ್ದು ಹಾತ್ ನಕಾಶೆಯಲ್ಲಿ ಕಾಣಿಸಿದ ಎ ಮತ್ತು ಬಿ ಕಂಬದಿಂದ ಅನಾದಿಕಾಲದಿಂದ ಇದ್ದ ವಿದ್ಯುತ್ ತಂತಿಯನ್ನು ಸಹ 1ನೇ ಪ್ರತಿವಾದಿ ಸಂಸ್ಥೆಗೆ ಗೊತ್ತಾಗದಂತೆ ಕಾನೂನು ಬಾಹಿರವಾಗಿ ಕತ್ತರಿಸಿರುತ್ತಾರೆ ಎಂಬುದಾಗಿದೆ. ಆದರೆ

ಇದಕ್ಕೆ ಪ್ರತಿಯಾಗಿ ವಾದಿಯು ತನ್ನ ದಾವೆಯಲ್ಲಿ ತಾನು ದಾವಾ ವಿದ್ಯುತ್ ಕಂಬಗಳಿಗೆ ಇದ್ದ ವಿದ್ಯುತ್ ಸಂಪರ್ಕದ ಕುರಿತು ಕೊಟೇಡ್ ವೈರನ್ನು 1ನೇ ಪ್ರತಿವಾದಿ ಸಂಸ್ಥೆಗೆ ನೀಡಿದ ನಂತರ 1ನೇ ಪ್ರತಿವಾದಿ ಸಂಸ್ಥೆಯವರು ದಿನಾಂಕ 21-2-2018 ರಂದು ಸದರಿ ಕಂಬದಿಂದ ಈ ಮೊದಲು ಇದ್ದ ವಿದ್ಯುತ್ ತಂತಿಯನ್ನು ಡಿಸ್‌ಕನೆಕ್ಟ್ ಮಾಡಿ 2ನೇ ಪ್ರತಿವಾದಿ ಮನೆಗೆ ಹಾಗೂ ಇತರೆ ಮನೆಗಳಿಗೆ ಬೇರೆ ವಿದ್ಯುತ್ ಕಂಬದಿಂದ ವಿದ್ಯುತ್ ಸಂಪರ್ಕ ಕಲ್ಪಿಸಿದ್ದು ಇರುತ್ತದೆ ಎಂದು ಹೇಳಿರುತ್ತಾರೆ. ಈ ಕುರಿತು 2ನೇ ಪ್ರತಿವಾದಿಯು ತನ್ನ ಪರವಾಗಿ 4 ದಾಖಲೆಗಳನ್ನು ಹಾಜರಪಡಿಸಿದ್ದು ಅವುಗಳಲ್ಲಿ 2ನೇ ಪ್ರತಿವಾದಿಯು 1ನೇ ಪ್ರತಿವಾದಿಗೆ ವಾದಿಯು ಅನಧಿಕೃತವಾಗಿ ವಿದ್ಯುತ್ ಸಂಪರ್ಕ ತಪ್ಪಿಸಿದ್ದರ ಕುರಿತು ನೀಡಿದ ದೂರು, ಆ ಕುರಿತು 2ನೇ ಪ್ರತಿವಾದಿಯು ಪೊಲೀಸರಿಗೆ ನೀಡಿದ ದೂರು, ಕುಮಟಾ ಠಾಣೆಯ ಠಾಣಾಧಿಕಾರಿಗಳು ಜೂಜೆ ಪ್ರಾನ್ಸಿಸ್ ರೊಡ್ರಿಗಸ್ ಇವರು ನೀಡಿದ ಹೇಳಿಕೆ ಹಾಗೂ ಪೊಲೀಸರು 2ನೇ ಪ್ರತಿವಾದಿಯ ತಾಯಿಗೆ ನೀಡಿದ ಹಿಂಬಹರ ಇರುತ್ತವೆ. ಸದರಿ ದಾಖಲೆಗಳ ಪೈಕಿ ಜೂಜೆ ಪ್ರಾನ್ಸಿಸ್ ರೊಡ್ರಿಗಸ್ ಇವರು ಪೊಲೀಸರ ಮುಂದೆ ನೀಡಿರುವ ಹೇಳಿಕೆಯನ್ನು ಪರಿಶೀಲಿಸಿದರೆ ತಾನು ವಾದಿಯ ಕೋರಿಕೆಯ ಮೇರೆಗೆ 2ನೇ ಪ್ರತಿವಾದಿಯ ತಾಯಿಯ ಮನೆಯವರಿಗೆ ಸಂಬಂಧಿಸಿದ ವಿದ್ಯುತ್ ಸಂಪರ್ಕ ತಪ್ಪಿಸಿ ಬೇರೆ ಮಾರ್ಗದಿಂದ ವಿದ್ಯುತ್ ಸಂಪರ್ಕ ಮಾಡಿಕೊಟ್ಟಿರುವುದಾಗಿ ಹೇಳಿದ್ದು ಆ ಕುರಿತು  ವಾದಿಯು ವಿದ್ಯುತ್ ಇಲಾಖೆಯಿಂದ ಅನುಮತಿ ಪಡೆದುಕೊಂಡಿರುವಿರಾ ಎಂದು ವಾದಿಯನ್ನು ಕೇಳಿದಾಗ ವಾದಿಯು ತಾನು ಪಡೆದುಕೊಂಡಿದ್ದೇನೆ ಎಂದು ಹೇಳಿದ ಮೇರೆಗೆ ತಾನು ಆ ಕೆಲಸ ಮಾಡಿರುವುದಾಗಿ ಹೇಳಿರುತ್ತಾರೆ. ಆದರೆ ವಾದಿಯು 1ನೇ ಪ್ರತಿವಾದಿ ಸಂಸ್ಥೆಯವರು ಆ ಕುರಿತು ತನಗೆ ನೀಡಿದ್ದ ಯಾವುದೇ ಪರವಾನಿಗೆಯನ್ನು ಹಾಜರಪಡಿಸಿರುವುದಿಲ್ಲಾ. 1ನೇ ಪ್ರತಿವಾದಿಯು ತನ್ನ ಉದಾಹರಣೆಯಲ್ಲಿಯೇ ತಮ್ಮ ಸಂಸ್ಥೆಯಿಂದ ಆ ರೀತಿಯ ಯಾವುದೇ ಪರವಾನಿಗೆಯನ್ನು ವಾದಿಗೆ ನೀಡಿದ್ದು ಇರುವುದಿಲ್ಲಾ ಎಂದು ಹೇಳಿರುತ್ತಾರೆ. ಅದಲ್ಲದೇ ಯಾವ ವಿದ್ಯುತ್ ಕಂಬದಿಂದ ಯಾವ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕು ಎಂಬುದು ಮತ್ತು ಒಂದು ವೇಳೆ ಆ ಕುರಿತು ಯಾವುದೇ ಅಪಾಯ ಇದ್ದರೆ ಯಾವ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದು 1ನೇ ಪ್ರತಿವಾದಿ ಸಂಸ್ಥೆಯ ಅಧಿಕಾರ ವ್ಯಾಪ್ತಿಗೆ ಬಿಟ್ಟದ್ದಾಗಿರುತ್ತದೆ. ಆ ಕುರಿತು 1ನೇ

ಪ್ರತಿವಾದಿ ಸಂಸ್ಥೆಯವರು ಕೈಗೊಂಡ ನಿರ್ಣಯಗಳ ವಿರುದ್ದ ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನಿಸಲು ವಿದ್ಯುತ್‌ಚಕ್ತಿ ಕಾಯಿದೆಯಡಿಲ್ಲಿ ನಿರ್ಬಂಧ ಇರುತ್ತದೆ. ಕಾರಣ ಈ ಹಂತದಲ್ಲಿ ವಾದಿಯು ತಾತ್ಕಾಲಿಕ ತಡೆಯಾಜ್ಞೆ ಪಡೆದುಕೊಳ್ಳಲು ತನ್ನ ಪರವಾಗಿ ಮೇಲ್ನೊಟದ ದಾವೆ ಇಲ್ಲಾ ಎಂದು ನಿರ್ಣಯಿಸಿ, ಅನೂಕೂಲತೆಯ ಒಲವು ವಾದಿಯ ಪರ ಇಲ್ಲವೆಂದು ಮತ್ತು ತಾತ್ಕಾಲಿಕ ತಡೆಯೂಜ್ಞೆ ನೀಡದಿದ್ದರೇ ವಾದಿಗೆ ಯಾವುದೇ ಹಣದಿಂದ ತುಂಬಲಾರದ ನಷ್ಟ ಆಗುವುದಿಲ್ಲಾ ಎಂದು ನಿರ್ಣಯಿಸಿ **ಅಂಶ ನಂ 1 ರಿಂದ 3ನ್ನು ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

11. **ಅಂಶ ನಂ.4ಃ-** ಈ ಮೇಲೆ ಚರ್ಚಿಸಿದ ಕಾರಣಗಳಿಗಾಗಿ ಈ ಕೆಳಕಂಡಂತೆ ಮಾಡುವಃ

**ಆದೇಶ**

**ವಾದಿಯರು ಸಿ.ಪಿ.ಸಿ ಕ್ರಮಾದೇಶ 39 ನಿಯಮ 1 ಮತ್ತು 2 ಸಹ ವಾಚಕ ಕಲಂ 151ರಡಿಯಲ್ಲಿ ಸಲ್ಲಿಸಿದ ಮಧ್ಯಂತ ಅರ್ಜಿ ನಂಬರ 3ನ್ನು ತಿರಸ್ಕರಿಸಲಾಗಿದೆ.**

(ಈ ಆದೇಶವನ್ನು ಬೆರಳಚ್ಚುಗಾರರಿಗೆ ಕಂಪ್ಯೂಟರ ಮೂಲಕ ನೇರವಾಗಿ ಉಕ್ತಲೇಖನ ಕೊಟ್ಟು, ಬೆರಳಚ್ಚು ಮಾಡಿಸಿದ ನಂತರ ಅದು ನನ್ನಿಂದ ಪರಿಷ್ಕರಿಸಲ್ಪಟ್ಟಿದ್ದು ದಿನಾಂಕಃ14.08.2018 ನೇ ಇಸವಿಯಂದು ಬಹಿರಂಗ ನ್ಯಾಯಾಲಯದಲ್ಲಿ ಓದಲಾಯಿತು.)

**(ಮೋಹನಕುಮಾರಿ ಎನ್.ಬಿ.)**
**ಹೆಚ್ಚುವರಿ ಸಿವಿಲ್ ಜಡ್ಜ್ ಕುಮಟಾ.**